# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್ – 145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಶ್ರೀಮತಿ.ಲಕ್ಷ್ಮೀದೇವಿ ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ: 08.03.2021 ರಂದು ಸೋಮವಾರ ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ.ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
|---|---|
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್–145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ Horticulture, AEE, AE, Assessor, SHI, JHI RI, TI & Electrical<br>3) ವಿಲ್ಸನ್ ಗಾರ್ಡನ್ ವೆಲ್‌ಫೇರ್ ಅಸೋಸಿಯೇಷನ್. | 1. Forest, BESCOM, , BWSSB, Ward-145 Marshalls, Police & Traffic Department.<br>2. Garbage Contractor. |

**==**==**

1. <u>ಘನತ್ಯಾಜ್ಯ ನಿರ್ವಹಣೆ ವಿಭಾಗ</u> :–

- ವಿಲ್ಸನ್ ಗಾರ್ಡನ್ ವ್ಯಾಪ್ತಿಯ 4, 5 ಮತ್ತು 6 ನೇ ಅಡ್ಡ ರಸ್ತೆಯಲ್ಲಿ ಪೌರಕಾರ್ಮಿಕರು ಸರಿಯಾಗಿ ರಸ್ತೆ ಕಸ ಗುಡಿಸುತ್ತಿಲ್ಲ ಹಾಗೂ ತ್ಯಾಜ್ಯ ಸಂಗ್ರಹಿಸುವ ಆಟೋ ಆ ರಸ್ತೆಗಳಿಗೆ ಬರುತ್ತಿಲ್ಲವೆಂದು ಸಭೆಯಲ್ಲಿ ವೆಲ್‌ಫೇರ್ ಅಸೋಸಿಯೇಷನ್ ಸಂಘದ ಮುಖ್ಯಸ್ಥರು ಹಾಗೂ ಸದಸ್ಯರು ತಿಳಿಸಿರುತ್ತಾರೆ.
- ತ್ಯಾಜ್ಯ ಸಂಗ್ರಹಣೆ ಮಾಡುವ ಆಟೋಗಳು ಸಂಗ್ರಹಣೆ ನಂತರ 8 ಮತ್ತು 9 ನೇ ಕ್ರಾಸ್ ಬಿ.ಟಿ.ಎಸ್ ರಸ್ತೆಯಲ್ಲಿ ಆಟೋಗಳು ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರು ತ್ಯಾಜ್ಯವನ್ನು ತಂದು ಎಸೆಯುತ್ತಿರುವುದರಿಂದ ಅಲ್ಲಿನ ಸುತ್ತಮುತ್ತಲ್ಲಿನ ಜಾಗವು ನೈರ್ಮಲ್ಯಗೊಳ್ಳುತ್ತಿರುತ್ತದೆ, ಆದುದರಿಂದ ರಸ್ತೆಯಲ್ಲಿ ಕಸ ಸಂಗ್ರಹಣೆ ನಂತರ ಆಟೋ ಟಿಪ್ಪರ್‌ಗಳು ಪ್ರತಿನಿತ್ಯ ನಿಲ್ಲುವ ಜಾಗವನ್ನು ಬದಲಾಯಿಸುವುದರಿಂದ ಸಾರ್ವಜನಿಕರು ನಿರಂತರ ಕಸ ಎಸೆಯುತ್ತಿರುವುದರಿಂದ ಆಗುತ್ತಿರುವ **Black Spot** ಗಳನ್ನು ತಡೆಗಟ್ಟಬಹುದು.

ಪು.ತಿ.ನೋ

Scanned with CamScanner

- ಕಸದ ಗಾಡಿಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ವಿಂಗಡಣೆ ಬಗ್ಗೆ Announcement ನೀಡಲು ಈಗಾಗಲೇ ಹಲವು ಬಾರಿ ಸಭೆಗಳಲ್ಲಿ ಸೂಚಿಸಿದ್ದರು ಈವರೆಗೂ ಯಾವುದೇ ರೀತಿ ಕ್ರಮವಹಿಸಿರುವುದಿಲ್ಲ. ಆದ್ದರಿಂದ ಕೂಡಲೇ ಎಲ್ಲಾ ಆಟೋಗಳಲ್ಲಿ ತ್ಯಾಜ್ಯ ವಿಂಗಡಣೆ ಬಗ್ಗೆ **Announcement** ನೀಡಲು ಕ್ರಮವಹಿಸುವುದು.
- ಲಕ್ಕಸಂದ್ರ ರಸ್ತೆಯಲ್ಲಿ ಬಿ.ಬಿ.ಎಂ.ಪಿ ಯ ಖಾಲಿ ಜಾಗ ಇರುವುದನ್ನು ತ್ಯಾಜ್ಯ ಸಂಗ್ರಹಿಸುವ ಆಟೋ ಟಿಪ್ಪರ್‌ಗಳ ನಿಲ್ದಾಣಕ್ಕಾಗಿ ಉಪಯೋಗಿಸುವುದರಿಂದ ಸಾರ್ವಜನಿಕರು ತ್ಯಾಜ್ಯವನ್ನು ಆಟೋ ಟಿಪ್ಪರ್‌ಗಳು ರಸ್ತೆಯಲ್ಲಿ ನಿಂತಿರುವ ಜಾಗಕ್ಕೆ ತಂದು ಎಸೆಯುವುದು ತಡೆಗಟ್ಟಬಹುದು.
- ಸೂಪರ್‌ವೈಸರ್‌ಗಳು ತಮ್ಮ ವ್ಯಾಪ್ತಿಯ ಪೌರಕಾರ್ಮಿಕರ ಕಾರ್ಯ ಚಟುವಟಿಕೆ ಬಗ್ಗೆ ದಿನ ನಿತ್ಯ ಗಸ್ತು ತಿರುಗುವುದರ ಮೂಲಕ ಕೂಲಂಕುಷವಾಗಿ ಪರಿಶೀಲಿಸಿ ಮೇಲ್ವಿಚಾರಣೆ ನಡೆಸುವುದು.
- ರಸ್ತೆವಾರು ಸೂಪರ್‌ವೈಸರ್, ಸ್ವೀಪರ್ (ಆಟೋ ಟಿಪ್ಪರ್) ರವರುಗಳ ದೂರವಾಣಿ ಸಂಖ್ಯೆಯೊಂದಿಗೆ ಮಾಹಿತಿ ಪಟ್ಟಿಯನ್ನು ನೀಡುವುದು.

**2. <u>ವಿದ್ಯುತ್ ವಿಭಾಗ</u> :-**

- ಈ ಹಿಂದಿನ ಸಭೆಯಲ್ಲಿ ಬಂಡೆ ಸ್ಲಂ ವ್ಯಾಪ್ತಿಯಲ್ಲಿನ ವಿದ್ಯುತ್ ಕಂಬಗಳಲ್ಲಿ ದೀಪಗಳು ಇಲ್ಲದಿರುವ ಬಗ್ಗೆ ಕ್ರಮವಹಿಸಲು ಸಂಬಂಧಪಟ್ಟ ಸಿಬ್ಬಂಧಿಯವರಿಗೆ ಸೂಚಿಸಲಾಗಿತ್ತು, ಅದ್ದರಂತೆ ದೀಪಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಅದೇ ರಸ್ತೆಯಲ್ಲಿ ಒಂದು ವಿದ್ಯುತ್ ಕಂಬ ಬೀಳುವ ಸ್ಥಿತಿಯಲ್ಲಿರುವುದನ್ನು ಬೆ.ಸ್ಕಾಂ ರವರಿಗೆ ಸೂಕ್ತ ಕ್ರಮವಹಿಸುವಂತೆ ಸೂಚಿಸಲಾಗಿದೆ.

**3. <u>ಕಾಮಗಾರಿ</u> :-**

- ಪಾದಚಾರಿ ರಸ್ತೆಗಳಲ್ಲಿ ಹಲವು ಅಂಗಡಿಗಳನ್ನು ನಡೆಸುತ್ತಿದ್ದು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದರಿಂದ ಅಂಗಡಿಗಳನ್ನು ತೆರವುಗೊಳಿಸಲು **Footpath Encroachment Drive** ಆಂದೋಲನವನ್ನು ನಡೆಸುವ ಬಗ್ಗೆ ಮುಂದಿನ ಕಾರ್ಯ ಯೋಜನೆಯನ್ನು ರೂಪಿಸಿಕೊಳ್ಳಲು ಸಂಬಂಧಪಟ್ಟ ಸಿಬ್ಬಂಧಿಯವರಿಗೆ ಸೂಚಿಸಲಾಯಿತು.
- ಅಗಡಿ ಆಸ್ಪತ್ರೆ 9ನೇ ಕ್ರಾಸ್ ರಸ್ತೆಯ ಕಾಂಕ್ರಿಟ್ ಹಾಳಾಗಿದ್ದು ಸರಿಪಡಿಸಲು ಕೋರಿರುತ್ತಾರೆ, ಸಂಬಂಧಪಟ್ಟ ಸಿಬ್ಬಂಧಿಯವರಿಗೆ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.

ಪು.ತಿ.ನೋ.

Scanned with CamScanner

4. ಆರೋಗ್ಯ ವಿಭಾಗ :-

- ಬಿ.ಟಿ.ಎಸ್ ರಸ್ತೆಯಲ್ಲಿ ಮೀನು ಮಾರಾಟ ಅಂಗಡಿಗಳು ಹೆಚ್ಚಾಗಿದ್ದು ಸುತ್ತಮುತ್ತಲ್ಲಿನ ನಿವಾಸಿಗರಿಗೆ ಹಾಗೂ ವಾಹನ ಸಂಚಾರಸ್ಥರಿಗೆ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ, ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು SHI ರವರಿಗೆ ಸೂಚಿಸಲಾಯಿತು.

5. ಪಶುಸಂಗೋಪನೆ ವಿಭಾಗ :-

- ಬೀದಿ ನಾಯಿಗಳು ವಿಲ್ಸನ್ ಗಾರ್ಡ್‌ನ್ ವ್ಯಾಪ್ತಿಯಲ್ಲಿ ಹೆಚ್ಚು ಕಂಡುಬಂದಿದ್ದು ರಸ್ತೆಗಳಲ್ಲಿ ಸಾರ್ವಜನಿಕರು ಆತಂಕದಿಂದ ಓಡಾಡುವ ಪ್ರಮೇಯ ಇರುವುದರಿಂದ ಕೂಡಲೇ ಸಂಬಂಧಪಟ್ಟ ಸಿಬ್ಬಂಧಿರವರಿಗೆ ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮವಹಿಸಲು ಸೂಚಿಸಿದೆ.
- ಬೇಸಿಗೆ ಕಾಲ ಆರಂಭಗೊಳ್ಳುತ್ತಿದ್ದು ಎಲ್ಲೆಡೆ **Mosquitoe** ಗಳು ಹೆಚ್ಚಾಗಿದ್ದು ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ಕೂಡಲೇ **Mosquito Control Spray** ರವರಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

6. ಟ್ರಾಫಿಕ್ ವಿಭಾಗ :-

- ಬಿ.ಟಿ.ಎಸ್ ರಸ್ತೆಯಿಂದ ಆಡುಗೋಡಿ ಪೋಸ್ಟ್ ಆಫೀಸ್ ರಸ್ತೆಯವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಪಾರ್ಕಿಂಗ್ ಮಾಡಿರುವ ವಾಹನಗಳನ್ನು ತೆರವುಗೊಳಿಸುವಂತೆ ಈಗಾಗಲೇ 2 ಬಾರಿ ಆರಕ್ಷಕ ಠಾಣಾಧಿಕಾರಿಗಳು (ಟ್ರಾಫಿಕ್ ವಿಭಾಗ) ವಿಲ್ಸನ್ ಗಾರ್ಡ್‌ನ್‌ರವರಿಗೆ ಪತ್ರ ಬರೆದು ಹಾಗೂ ಹಲವು ಬಾರಿ ಸಭೆಗಳಲ್ಲಿನ ಸಭಾ ನಡವಳಿಗಳಲ್ಲಿ ತಿಳಿಸಲಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

| | |
|---|---|
| ಕಾರ್ಯನಿರ್ವಾಹಕ ಹಾಗೂ | ಅಧ್ಯಕ್ಷರು ಹಾಗೂ |
| ಸಹಾಯಕ ಅಭಿಯಂತರರು | ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ – 145 | ವಾರ್ಡ್ ಸಂಖ್ಯೆ – 145 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಪ್ರತಿಯನ್ನು:-

1) ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ವಲಯ ಆಯುಕ್ತರುರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
5) ತಂಡದ ಎಲ್ಲಾ ಸಿಬ್ಬಂಧಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

Scanned with CamScanner